ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,
ದೇವದುರ್ಗ.

**CC No.469/2023**

**CW-8 / PW-3**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಕೊನಪ್ಪ |
| ತಂದೆ | ಃ | ಆಂಜನೇಯ್ಯ |
| ವಯಸ್ಸು | ಃ | 67 |
| ಉದ್ಯೋಗ | ಃ | ನಿವೃತ್ತಿದಾರ |
| ವಾಸಸ್ಥಳ | ಃ | ಯರಮರಸ್ |
| ಪ್ರಮಾಣಿಕರಿಸಿದ ದಿನಾಂಕ | ಃ | **20-11-2025** |

ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.

ನಾನು 2016 ರಿಂದ 2018 ವರೆಗೆ ಎ.ಎಸ್.ಐ ಎಂದು ಗಬ್ಬೂರು ಠಾಣೆಯಲ್ಲಿ ಕೆಲಸ ಮಾಡಿರುತ್ತೇನೆ.

ದಿನಾಂಕ 02.10.2016 ರಂದು ರಾತ್ರಿ 11.30 ಗಂಟೆಗೆ ನಾನು ಠಾಣಾ ಪ್ರಭಾರದಲ್ಲಿ ಇದ್ದಾಗ ರಾಯಚೂರು ರಿಮ್ಸ್ ಆಸ್ಪತ್ರೆಯಿಂದ ಎಂ.ಎಸ್.ಸಿ ಬಂದಿದ್ದು ದಿನಾಂಕ 03.10.2016 ರಂದು ಬೆಳಿಗ್ಗೆ ಹೆಚ್.ಸಿ 102 ಇವರನ್ನು ಆಸ್ಪತ್ರೆಗೆ ಕಳುಹಿಸಿ ಪಿರ್ಯಾದಿ ಹೇಳಿಕೆ ಪಡೆಯುವಂತೆ ಸೂಚಿಸಿದ ಮೇರೆಗೆ ಸದರಿಯವರು ಗಾಯಾಳು ಪಿರ್ಯಾದಿ ಹೇಳಿಕೆ ಪಡೆದು ಠಾಣೆಗೆ ಮಧ್ಯಾಹ್ನ 1 ಗಂಟೆಗೆ ಬಂದು ಹಾಜರು ಪಡಿಸಿದ ಹೇಳಿಕೆ ದೂರಿನ ಸಾರಾಂಶದ ಮೇರೆಗೆ ಠಾಣಾ ಗುನ್ನ ನಂ.132/2016 ರಲ್ಲಿ ಪ್ರಕರಣ ದಾಖಲು ಮಾಡಿಕೊಂಡು ಪ್ರ.ವ ವರದಿ ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದೇ ದಿನ ಮಧ್ಯಾಹ್ನ 3 ರಿಂದ 4 ಗಂಟೆ ವರೆಗೆ ಚಾಸಾ-2 ಮತ್ತು 3 ರವರ ಸಮಕ್ಷಮ ಚಾಸಾ-4 ರವರು ತೋರಿಸಿದ ಸ್ಥಳದಲ್ಲಿ ಪಂಚನಾಮೆ ಮಾಡಿ ಸ್ಥಳದಿಂದ ಒಂದು ಕೊಡ್ಲಿ ಖಾವು ಹಾಗೂ ಸರಕಾರಿ ಜಾಲಿ ಕಟ್ಟಿಗೆಯನ್ನು ಜಪ್ತಿ ಮಾಡಿಕೊಂಡಿರುತ್ತೇನೆ. ಅದೇ ದಿನ ಸಾಕ್ಷಿದಾರರ ಹೇಳಿಕೆಗಳನ್ನು ಮತ್ತು ಚಾಸಾ-1 ರವರ ಪುರವಣಿ ಹೇಳಿಲೆ ಪಡೆದಿರುತ್ತೇನೆ. ದಿನಾಂಕ 19.10.2016 ರಂದು ಆರೋಪಿತರು ಠಾಣೆಗೆ ಹಾಜರಾಗಿದ್ದು ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿನಾಂಕ 27.10.2016 ರಂದು ಗಾಯಾಳು ಚಾಸಾ-1 ರವರ ಗಾಯದ ಪ್ರಮಾಣ ಪತ್ರವನ್ನು ರಿಮ್ಸ್ ರಾಯಚೂರು ಆಸ್ಪತ್ರೆಯಿಂದ ಪಡೆದಿರುತ್ತೇನೆ. ಸದರಿ ಗಾಯದ ಪ್ರಮಾಣ ಪತ್ರದ ಆಧಾರದ ಮೇಲೆ ಅಂತಿಮ ವರದಿಯನ್ನು ಕಲಂ 326 ಹೆಚ್ಚುವರಿಯಾಗಿ ಸೇರಿಸಿ ಆರೋಪಿತರ ವಿರುದ್ದ ಅಂತಿಮ ವರದಿ ನೀಡಿರುತ್ತೇನೆ.

ನಿಪಿ-1 ಮೇಲೆ ಇದ್ದ ಸಾಕ್ಷಿ ಸಹಿಯನ್ನು ನಿಪಿ-1 ಎ ಎಂದು, ಪ್ರ.ವ ವರದಿಯನ್ನು ನಿಪಿ-2 ಎಂದು ಸಹಿಯನ್ನು ನಿಪಿ-2 ಎ ಎಂದು, ಪಂಚನಾಮೆಯನ್ನು ನಿಪಿ-3 ಎಂದು ಸಹಿಯನ್ನು ನಿಪಿ-3 ಎ ಎಂದು, ಗಾಯದ ಪ್ರಮಾಣ ಪತ್ರವನ್ನು ನಿಪಿ-4 ಎಂದು ಸಹಿಯನ್ನು ನಿಪಿ-4 ಎ ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿತರು ಮತ್ತು ಅವರ ಪರ ವಕೀಲರು ಗೈರು ಹಾಜರು ಇದುದ್ದರಿಂದ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.